ಆಲಮಟ್ಟಿ ನಾರಾಯಣಪುರ ರಸ್ತೆ ಕಾಮಗಾರಿ

535 (902) ಶ್ರೀ ಅಪ್ಪಾಜಿ. ಸಿ.ಎಸ್. ನಾಡಗೌಡ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ–ನಾರಾಯಣಪುರಕ್ಕೆ ಸೇರುವ ಮುಖ್ಯ ರಸ್ತೆಯು ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯು ಒಟ್ಟು ಎಷ್ಟು ಕಿ.ಮೀ. ಉದ್ದ ಇದೆ;

ಇ) ಕಳೆದ 2010–11 ಮತ್ತು 2011–12ನೇ ಸಾಲಿನಲ್ಲಿ ಈ ರಸ್ತೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು;

ಈ) ಈ ರಸ್ತೆಯನ್ನು ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ (ಸಂಪೂರ್ಣ ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಗಮನಕ್ಕೆ ಬಂದಿದೆ. ಈಗಾಗಲೇ ಕಾಮಗಾರಿಗಳನ್ನು ಕೈಗೆತ್ತಿಕೊಂಡು ವಾಹನ ಸಂಚಾರಕ್ಕೆ ರಸ್ತೆಯು ಸುಸ್ಥಿತಿಯಲ್ಲಿರಿಸಲಾಗಿದೆ.

ಆ) ಒಟ್ಟು 53 ಕಿ.ಮೀ. ಉದ್ದ ಇದೆ. (ಆಲಮಟ್ಟಿಯಿಂದ ಮುದ್ದೇಬಿಹಾಳದವರೆಗೆ 27 ಕಿ.ಮೀ. ಆಗಿದ್ದು, ಮತ್ತು ಮುದ್ದೇಬಿಹಾಳದಿಂದ ನಾರಾಯಣಪುರದವರೆಗೆ 26 ಕಿ.ಮೀ. ಇರುತ್ತದೆ)

ಇ) 2010–11ನೇ ಸಾಲಿನಲ್ಲಿ ರೂ.99.36 ಲಕ್ಷ ಮತ್ತು 2011–12ನೇ ಸಾಲಿನಲ್ಲಿ ರೂ.94.89 ಲಕ್ಷ ಬಿಡುಗಡೆಯಾಗಿದ್ದು, ಕಾಮಗಾರಿಯು ನಡೆಯುತ್ತಿದ್ದು ಮುಕ್ತಾಯ ಹಂತದಲ್ಲಿದೆ.

ಈ) ಆಲಮಟ್ಟಿ–ಮುದ್ದೇಬಿಹಾಳ್ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿ ಪಡಿಸುವಂತೆ ಸರ್ಕಾರವು ಆದೇಶಿಸಿದ್ದು, ನಬಾರ್ಡ್ ರಡಿ ದಿನಾಂಕ: 23–06–2012 ರಂದು ಟೆಂಡರ್ ಕರೆಯಲಾಗಿದೆ.

ಮುದ್ದೇಬಿಹಾಳ್‌ನಿಂದ ನಾರಾಯಣಪುರದವರೆಗಿನ ರಸ್ತೆಗೆ ಲೋಕೋಪಯೋಗಿ ಇಲಾಖೆಯ ಎಸ್.ಹೆಚ್.ಡಿ.ಪಿ ಹಂತ–1 ರಡಿ ಟೆಂಡರ್ ಅನುಮೋದನೆ ಹಂತದಲ್ಲಿದೆ ಎಂದು ತಿಳಿದು ಬಂದಿದೆ.